ಮನುಷ್ಯನ ಅಂತರಂಗದತ್ತ ದೃಷ್ಟಿ ಮಡಗಿ ಅಲ್ಲಿಯ ತಾಕಲಾಟಗಳನ್ನು, ವಿದ್ಯಮಾನಗಳನ್ನು ವಿವರಿಸತೊಡಗುತ್ತಾನೆ. ಈ ಅರ್ಥದಲ್ಲಿ ಪಂಪಭಾರತ, ಗದಾಯುದ್ಧ ಪರಾಕ್ರಮಿಗಳ ಚರಿತ್ರೆಯಾದರೆ, ಜನ್ನನ ಯಶೋಧರನ ಕಥೆ ಮನುಷ್ಯ ಜೀವಿಗಳ ಅಂತರಂಗ ಚರಿತೆಯಾಗುತ್ತದೆ. ಅಮೃತಮತಿಯ ಅನ್ಯಪುರುಷ ಮೋಹ, ಅಷ್ಟಾವಂಕನ ಕಾಮ, ಮಾರಿದತ್ತನ ಹಿಂಸಾವೃತ ಮಾರಿಯ ಬಲಿ ಇದೆಲ್ಲದರ ಎದುರು ನಿಂತ ಅಭಯರುಚಿ, ಅಭಯಮತಿಯರ ನಿರ್ಮಲ ಧರ್ಮದ ಸಂಗತಿ ಜನ್ನನ ಯಶೋಧರ ಚರಿತೆಯೆಂಬ ಖಂಡಕಾವ್ಯದಲ್ಲಿ ನಿರೂಪಿತವಾಗುತ್ತದೆ.

ಜನ್ನನು ಮೊದಲ ಬಾರಿಗೆ ಕೇವಲ ಯುದ್ಧ ಕಥೆ ಹೇಳುವುದನ್ನು ಬಿಟ್ಟು ಸ್ತ್ರೀ ಪುರುಷರ ಅಂತರಂಗಕ್ಕೆ ಕೈ ಹಾಕಿ ಅಮೃತಮತಿಯ ಮನದಾಳದಿಂದ 'ಮರುಳೇ ಪೊಲ್ಲಮೆಯೆ ಲೇಸು ನಲ್ಲರ ಮೈಯೊಳ್' ಎಂದು ಹೇಳಿಸಿದರೆ ಅನಂತನಾಥ ಪುರಾಣದಲ್ಲಿ ಚಂಡಶಾಸನನ ಬಾಯಿಂದ 'ಕಡುನೆಂಟನ ಸತಿಯ ರೂಪು ಸೋಲಿಸಿತೆನ್ನಂ' ಎಂದು ಅವನ ಗೆಳೆಯ ಸುದರ್ಶನನ ಕಿವಿಯಲ್ಲಿ ಪಿಸುಗುಟ್ಟಿಸಿದ್ದಾನೆ. ಸ್ತ್ರೀ ಪುರುಷರ ವಿರುದ್ಧ ದಿಕ್ಕಿನ ಅಂತರಂಗದ ಮಾತುಗಳಿವು. ಯಶೋಧರನ ಮಗ್ಗುಲಲ್ಲಿ ಮಲಗಿದ್ದ ಅಮೃತಮತಿಗೆ ಅವನ ಸಾನ್ನಿಧ್ಯ ಇಷ್ಟವೋ ಅನಿಷ್ಟವೋ ಗೊತ್ತಿಲ್ಲ. ಈ ಬೀಜಧಾತು ಕಥನ ಸಂಗತಿಯು ಜನ್ನನಿಗಿಂತ ಹಿಂದೆ ಬಂದ ಕವಿಕೃತಿಗಳಲ್ಲಿ ಬೇರೆಬೇರೆಯಾಗಿಯೂ ನಿರೂಪಣೆಗೊಂಡಿದೆ. ಅಮೃತಮತಿಯ ಮನದಾಳದ ಮೋಹವನ್ನು ಮೀಟುವಂತೆ, ಪಲ್ಲಟಿಸುವಂತೆ ಸಾಮಾನ್ಯ ಪುರುಷನ ಅಸಾಮಾನ್ಯ ದನಿಯೊಂದು ಅವಳ ಶ್ರವಣೇಂದ್ರಿಯಗಳಿಗೆ ಮಾತ್ರವಲ್ಲ ಅಂತರಂಗವನ್ನೂ ತಟ್ಟಿಬಿಟ್ಟಿತು. ರಾಗ ಪಾಡಿದವನ ಬಗೆಗೆ ಅಮೃತಮತಿಗೆ ಅಲ್ಲೇ ತೀವ್ರ ಕುತೂಹಲ ಹುಟ್ಟಿ ಕಡೆಗೆ ಅವನ ಕುರೂಪವು ಸುಂದರವಾಗಿ ಮೂಡಿ ಅವಳ ಮನದಲ್ಲಿ ತಳಪಾಯ ಹಾಕಿಬಿಟ್ಟಿತು. ಈ ದಿಕ್ಕಿನಲ್ಲೇ ಮಿತ್ರನ ಮನೆಗೆ ಆತಿಥ್ಯಕ್ಕೆಂದು ಬಂದ ಚಂಡಶಾಸನ, ಅನ್ನವಿಕ್ಕಲು ಬಂದ ಮಿತ್ರನ ಸತಿ ಸುನಂದೆಗೆ ಮನಸೋತು, ಈ ಸುಂದರಿಯನ್ನು ಕೂಡುವ ಅಡ್ಡಮಾರ್ಗ ಯಾವುದೆಂದು ಯೋಚಿಸುತ್ತಾನೆ. ಈ ಬಗೆಯ ವಿರುದ್ಧ ಸಂಗತಿಗಳನ್ನು ಓದುಗರ ಮುಂದಿಟ್ಟು ಜನ್ನ 'ಪಱಿವ ಮನಕ್ಕೆ ಪಗ್ಗಮಿಲ್ಲ, ನೋಡುವ ಕಣ್ಗಳ್ಗೆ ಡೆಕಟ್ಟಿಲ್ಲ' ಎನ್ನುತ್ತಾನೆ. ಜಗತ್ತಿನ ಎಲ್ಲ ಮಹಾಕವಿಗಳು ವಿಧಿ ವಾದವನ್ನು ಒಪ್ಪಿಕೊಂಡಂತೆ ಜನ್ನನೂ 'ಮನಸಿಜಿನ ಮಾಯೆ ವಿಧಿವಿಳಸನದ ನೆಱಂಬಡೆಯೆ ಕೊಂದು ಕೂಗದೇ ನರರಂ' ಎಂದಿದ್ದಾನೆ. ಹೌದು, ನೆಲದೊಳಗಿನ ಅಂತರ್ಜಲದಂತೆ ಬೇಕಾದ ದಿಕ್ಕಿಗೆ, ಕಂಡ ರೂಪದತ್ತ ಹರಿಯುವ ಮನಸ್ಸನ್ನು ನಿಯಂತ್ರಿಸುವುದು ಕಷ್ಟ!

★★★

ಜನ್ನನ ಯಶೋಧರ ಚರಿತೆಯ ಕಥನದ ಮೂಲಧಾರೆ ಎಲ್ಲಿಂದ ಆರಂಭವಾಗಿರುವುದೆಂದು ತಿಳಿಯುವುದು ವಿದ್ವಾಂಸರಿಗೆ ಶ್ರಮವೆನಿಸಿದ ವಿಚಾರವಾಗಿ ಅದೂ ಚರ್ಚೆಯಲ್ಲಿರುತ್ತದೆ. ಗಂಡಂದಿರು ಯಾವುದೇ ಉನ್ನತ ಗತಿಯಲ್ಲಿರಲಿ ತಾವು ಪ್ರೀತಿಸಿದವರು ಎಂಥದೇ ಹೀನಸ್ಥಿತಿಯಲ್ಲಿರಲಿ ಒಲ್ಲದವರನ್ನು ಬಿಟ್ಟು ಒಲಿದವರ ಹಿಂದೆ ನಡೆಯುವ ಸ್ತ್ರೀಯರ ಕಥೆ ಮೊದಲಿಗೆ ಜನಪದ ಜಗತ್ತಿನಲ್ಲಿ, ಶಿಷ್ಟ ಪರಂಪರೆಯ ಕಥಾಸರಿತ್ಸಾಗರದಲ್ಲಿ ಬಹಳ ಸಂಖ್ಯೆಯಲ್ಲಿ ಕಾಣಿಸಿಕೊಳ್ಳುತ್ತವೆ. ಎಂಟನೇ ಶತಮಾನದ ಉದ್ಯೋತನ ಸೂರಿ ಎಂಬುವವನು ತನ್ನ ಕುವಲಯ ಮಾಲಾ ಎಂಬ ಪ್ರಾಕೃತ ಗ್ರಂಥದಲ್ಲಿ ಪ್ರಭಂಜನ ಮತ್ತು ಹರಿಷೇಣರ ಹೆಸರನ್ನು ಪ್ರಸ್ತಾಪಿಸುತ್ತಾ ಅವರು ಯಶೋಧರ ಚರಿತೆಯ ಮೂಲಕಥೆಯನ್ನು ರಚಿಸಿರುವಂತೆ ಸೂಚಿಸಿರುತ್ತಾನೆ. ಈ ಪ್ರಭಂಜನ ಮತ್ತು ಹರಿಷೇಣರ ಹೆಸರನ್ನು ಇನ್ನಿತರರೂ ಪ್ರಸ್ತಾಪಿಸಿರುವುದಿದೆ. ಆದರೆ ಇವರಿಬ್ಬರ ಕೃತಿಗಳು ಉಪಲಬ್ಧವಿಲ್ಲದ್ದರಿಂದ ಇವರ ಯಶೋಧರನ ಕಥಾ ರಚನೆ ಪ್ರಾಕೃತದಲ್ಲಿದ್ದಿರಬೇಕೆಂಬ ಊಹಾತ್ಮಕ ಅಭಿಪ್ರಾಯವಷ್ಟೆ ಸದ್ಯಕ್ಕೆ ಚಾಲ್ತಿಯಲ್ಲಿದೆ. ಪ್ರಭಂಜನ ಮತ್ತು ಹರಿಷೇಣರಿಗೂ ಮೂಲ ಇನ್ಯಾವುದು ಎಂಬ ಅನುಮಾನ